# ವಾರಾಣಸೀಪುರಪತಿಂ ಭಜ ವಿಶ್ವನಾಥಂ

ಪಿ. ಉಷಾ

(ಹಿಂದಿನ ಸಂಚಿಕೆಯಿಂದ)



ನೂತನ ವಿಶ್ವನಾಥ ಮಂದಿರ

**ನ**ಮ್ಮ ಮುಂದಿನ ಗುರಿ ಸಂಕಟಮೋಚನ ದೇವಸ್ಥಾನ. ಇದರ ಮೂಲದೇವತೆ ಮಹಾವೀರ ಹನುಮಂತ. ಇಲ್ಲಿರುವ ಸಿಂಧೂರಲೇಪಿತ ಕಿಶೋರ ಹನುಮಂತನ ಮೂರ್ತಿ ಬಹಳ ಮುದ್ದಾಗಿದೆ. ದರ್ಶನಾರ್ಥಿಗಳು ತುಳಸಿಮಾಲೆಯನ್ನು ಹನುಮಂತನಿಗೆ ಅರ್ಪಿಸಿ ಎದುರಿನ ಮಂಟಪದಲ್ಲಿ ಕುಳಿತುಕೊಂಡು ಶ್ರದ್ಧಾಭಕ್ತಿಯಿಂದ, 'ಹನುಮಾನ್ ಚಾಲೀಸಾ' ಪಠಣ ಮಾಡುವುದು ವಾಡಿಕೆ. ಶ್ರೀರಾಮನಾಮವನ್ನು ಬರೆದ ಕಾಗದಗಳ ಮಾಲೆಗಳನ್ನೂ ಭಕ್ತಾದಿಗಳು ಹನುಮಂತನಿಗೆ ಅರ್ಪಿಸಿ ತಮ್ಮ ಸಂಕಟಗಳ ನಿವಾರಣೆಗಾಗಿ ಬೇಡಿಕೊಳ್ಳುತ್ತಾರೆ. ಅದನ್ನು ನೋಡಿದಾಗ, ಭಕ್ತರ ಅಪಾರ ವಿಶ್ವಾಸ, ಪ್ರೀತಿ–ಪ್ರೇಮಗಳ ಪರಿಚಯವಾಗುತ್ತದೆ. ದೇವಾಲಯದ ವಿಶಾಲ ಅಂಗಳದಲ್ಲಿ ಬಹುತೇಕ ಮರಗಿಡಗಳಿದ್ದು, ಇದೊಂದು ಕೋತಿಗಳ ತಾಣವೂ ಆಗಿದೆ. ಭಕ್ತವೃಂದ ಅಲ್ಲಲ್ಲಿ ಶ್ರದ್ಧಾಭಕ್ತಿಗಳಿಂದ, 'ಜೈ ಜೈ ರಾಮ್ ಸೀತಾರಾಮ್' ಎನ್ನುತ್ತ, ರಾಮನಾಮ ಸಂಕೀರ್ತನೆಯಲ್ಲಿ ತೊಡಗಿರುವುದನ್ನು ಕಂಡಾಗ ನಮ್ಮಲ್ಲೂ ಭಕ್ತಿಭಾವವು ಉಕ್ಕಿ ಬರುತ್ತದೆ. ಹನುಮನ ಗುಡಿಯ ಎದುರಿನಲ್ಲೆ ಶ್ರೀರಾಮಮಂದಿರವೂ ಇದ್ದು, ಸೇವಕ ಹನುಮಂತನು ತನ್ನೊಡೆಯ ಶ್ರೀರಾಮನ ದರ್ಶನವನ್ನು ಸದಾ ಮಾಡುತ್ತಿರುವಂತಿದೆ.

ಮತ್ತೆ ಆಟೋ ಹತ್ತಿ, ಶ್ರೀ ಮದನಮೋಹನ ಮಾಳವೀಯರು ೧೯೧೬ ರಲ್ಲಿ ಸ್ಥಾಪಿಸಿದ, ಸುಪ್ರಸಿದ್ಧ ಬನಾರಸ್ ಹಿಂದೂ ವಿಶ್ವವಿದ್ಯಾಲಯದ ಕ್ಯಾಂಪಸ್‌ನ ಮೂಲಕ ಹಾದು, ಬಿರ್ಲಾರವರು ನಿರ್ಮಾಣ ಮಾಡಿದ ನೂತನ ವಿಶ್ವನಾಥ ಮಂದಿರಕ್ಕೆ ಬಂದೆವು. ಈ ಭವ್ಯ ದೇವಾಲಯವು ವಿಶಾಲವೂ ಸ್ವಚ್ಛವೂ ಆಗಿದ್ದು ಇಲ್ಲಿ ಪಂಚಮುಖಿ ಮಹಾದೇವ, ಪಾರ್ವತಿ, ಗಣೇಶರ ವಿಗ್ರಹಗಳಿವೆ. ಎರಡನೆಯ ಅಂತಸ್ತಿನಲ್ಲಿ ಮಹಾಮಾಯಾ, ಮಹಾದೇವಿ ಹಾಗೂ ಲಕ್ಷ್ಮೀನಾರಾಯಣರ ಮೂರ್ತಿಗಳಿದ್ದು, ಭಗವದ್ಗೀತೆಯ ಎಲ್ಲ ಶ್ಲೋಕಗಳನ್ನು ಅಮೃತ ಶಿಲೆಯ ಗೋಡೆಗಳ ಮೇಲೆ ಕೆತ್ತಿದ್ದಾರೆ. ಕಬೀರ, ತುಲಸೀದಾಸ, ರವಿದಾಸ, ಚೋಖಾಮೇಳಾ, ನಂದನಾರ್, ಶ್ರೀರಾಮಕೃಷ್ಣರಂಥ ಸಾಧು–ಸಂತರ ಬೋಧನೆಗಳನ್ನೂ, ಉಪನಿಷತ್ ವಾಕ್ಯಗಳನ್ನೂ, ಋಷಭದೇವ, ಬುದ್ಧ, ಕಪಿಲಮುನಿ ಮೊದಲಾದವರ ಸಂದೇಶಗಳನ್ನೂ ಗೋಡೆಗಳ ಮೇಲೆ ಮನಮೋಹಕ ಚಿತ್ರಗಳ ಮೂಲಕ ನಿರೂಪಿಸಲಾಗಿದೆ. 'ದೇವನೊಬ್ಬ, ನಾಮ ಹಲವು' ಎಂಬ ವಿಶಾಲ ತತ್ತ್ವವನ್ನು ಈ ದೇವಾಲಯವು ತನ್ನದೇ ಆದ ರೀತಿಯಲ್ಲಿ ಅಮೋಘವಾಗಿ ಸಾರುತ್ತಿದೆ.

ಆ ದಿನ ಸಂಜೆ, ಸಣ್ಣ ಸಣ್ಣ ಗಲ್ಲಿಗಳ ದಾರಿಯಲ್ಲಿ ಸಾಗಿ ವಾರಾಣಸಿಯ ಅತ್ಯಂತ ಸುಪ್ರಸಿದ್ಧ 'ಸಂಕಟಾದೇವಿ'ಯ ದರ್ಶನವನ್ನು ಮಾಡಿದೆವು. 'ಸಂಕಟಾಜೀ' ಎಂದು ಕರೆಸಿಕೊಳ್ಳುವ ಈ ದೇವಿಯು ನವಮಾತೃಕೆಯರಲ್ಲಿ ಒಬ್ಬಳು. ಈಕೆಯದು ಅಪಾರ ಶಕ್ತಿ; ಸಂಕಟಗಳಿಂದ ಪಾರಾಗಲು ವಾರಾಣಸಿಯ ಜನರು ಶುಕ್ರವಾರದಂದು ಈಕೆಯ ಹೆಸರಿನಲ್ಲಿ ವ್ರತವನ್ನು ಕೈಗೊಳ್ಳುತ್ತಾರೆ. ಸುಂದರ ಬೆಳ್ಳಿಯ ಕವಚ ಹಾಗೂ ಹೂವಿನ ಮಾಲೆಗಳಿಂದ ಅಲಂಕೃತಳಾದ ಸಂಕಟಾಮಾಯಿಯು ನಮ್ಮೆಲ್ಲರನ್ನೂ ಸರ್ವದುರಿತಗಳಿಂದ ಕಾಪಾಡಲೆಂದು ಮೊರೆಯಿಡುತ್ತ ಆತ್ಮವೀರೇಶ್ವರನ ದರ್ಶನಕ್ಕೆ ಹೊರಟೆವು.

ಕೊಲ್ಕತಾದ ವಿಶ್ವನಾಥ ದತ್ತರ ಧರ್ಮಪತ್ನಿ ಭುವನೇಶ್ವರಿದೇವಿಯು ಇದೇ ಆತ್ಮವೀರೇಶ್ವರನ ಪೂಜಾವ್ರತವನ್ನು ಕೈಗೊಂಡು ಸ್ವಾಮಿ ವಿವೇಕಾನಂದರನ್ನು ಪುತ್ರನಾಗಿ ಪಡೆದದ್ದು ನಮಗೆ ತಿಳಿದಿದ್ದರಿಂದ, ಈ ಶಿವಲಿಂಗದ ದರ್ಶನ ಮಾಡುವಾಗ

ಅಪಾರ ಶ್ರದ್ಧಾಭಕ್ತಿಗಳಿಂದ ತುಂಬಿಹೋಗಿದ್ದೆವು. ಈ ಶಿವ ಲಿಂಗವು ಪಂಚಮುದ್ರಾಪೀಠದಲ್ಲಿ ಸ್ಥಿತವಾಗಿದ್ದು ಪೀಠದ ಸುತ್ತಲೂ ಇಪ್ಪತ್ತೆಂಟು ಶಿವನ ಮುಖಗಳು ಅಂಕಿತವಾಗಿವೆ. ಈ ಭಗವದ್ರೂಪನಿಗೆ ನಮ್ರತಾಪೂರ್ವಕ ಪ್ರಣಾಮಗಳನ್ನು ಸಲ್ಲಿಸಿ ಹೊರಬಂದೆವು.

ಮತ್ತೆ ಗಲ್ಲಿಗಲ್ಲಿಗಳಲ್ಲಿ ಹೆಜ್ಜೆಹಾಕುತ್ತ ದಶಾಶ್ವಮೇಧ ಘಾಟಿಗೆ ಬಂದಾಗ ಸೇವಾಶ್ರಮದವರೆಲ್ಲರಿಗೂ ಸುಪರಿಚಿತನಾದ ನಾವಿಕ ಕಾಶೀನಾಥ ನನ್ನನ್ನು ಕಂಡು, "ಅಮ್ಮ, ಬನ್ನಿ ಬನ್ನಿ, ದೋಣಿಯಲ್ಲಿ ಉತ್ತರದ ಘಾಟಿನವರೆಗೂ ಕರೆದುಕೊಂಡು ಹೋಗುವೆ" ಎಂದಾಗ ಆನಂದವಾಯಿತು. ದೋಣಿ ಸಾಗಿದಂತೆ ಕಾಶಿನಾಥ, ವಿವಿಧ ಘಾಟುಗಳ ಬಗ್ಗೆ ವಿವರಿಸುತ್ತ ಹೋದನು.

ಹರಿಶ್ಚಂದ್ರ ಘಾಟಿನತ್ತ ಸಾಗುವಾಗ ಮುಖ್ಯವಾಗಿ ಪ್ರಯಾಗ, ಚೌಸಟ್ಟಿ ಹಾಗೂ ಕೇದಾರಘಾಟುಗಳು ಕಾಣಿಸುತ್ತವೆ. ಹರಿಶ್ಚಂದ್ರ ಘಾಟಿನಲ್ಲಿ ಎಲ್ಲರಿಗೂ ಕಾಣುವಂತೆಯೇ ಎರಡು ಚಿತೆಗಳು ಉರಿಯುತ್ತ ಇದ್ದುವು. "ಪುರಾಣಕಾಲದಲ್ಲಿ ಇದೇ ಶ್ಮಶಾನದಲ್ಲಿ ಸೇವೆ ಸಲ್ಲಿಸುತ್ತಿದ್ದ ಮಹಾರಾಜನಾದ ಹರಿಶ್ಚಂದ್ರ ಕೊಟ್ಟ ಮಾತನ್ನು ಉಳಿಸಿಕೊಳ್ಳಲು ಅದೆಷ್ಟು ಕಷ್ಟಪಟ್ಟನು, ಸತ್ಯಹರಿಶ್ಚಂದ್ರನೆಂದೇ ಪ್ರಖ್ಯಾತನಾದನು!" ಎಂದು ವಿವರಿಸುವಾಗ ಅವನ ಕಣ್ಣಿನಲ್ಲಿ ನೀರು ಹರಿಯುತ್ತಿತ್ತು. "ಈ ಕಲಿಗಾಲದಲ್ಲಿ ಸತ್ಯವೇ ತಪಸ್ಸು" ಎಂದು ಶ್ರೀರಾಮಕೃಷ್ಣರು ಸುಮ್ಮನೆ ಹೇಳಿದರೇನು? ಎಂದು ನಾನೂ ಆಲೋಚಿಸತೊಡಗಿದೆ.

ಅಷ್ಟರಲ್ಲಿ ಸೂರ್ಯ ಮುಳುಗತೊಡಗಿದ. ಕಾಶೀನಾಥನು ನೌಕೆಯನ್ನು ಉತ್ತರದಿಕ್ಕಿಗೆ ತಿರುಗಿಸಿದನು. ತಂಗಾಳಿ ಬೀಸುತ್ತಿದ್ದು ಹವೆ ಆಹ್ಲಾದಕರವಾಗಿತ್ತು. ಪಶ್ಚಿಮ ದಿಕ್ಕಿನತ್ತ ಕಣ್ಣು ಹಾಯಿಸಿದಾಗ ಸುಮಾರು ಎಂಬತ್ತು ಘಾಟುಗಳಿದ್ದ ವಾರಾಣಸಿಯ ತೀರವು ಮೂರು ಕಿಲೋಮೀಟರ್ ದೂರದವರೆಗೆ ಅರ್ಧಚಂದ್ರಾಕಾರದಲ್ಲಿ ಹರಡಿರುವುದರೆಡೆಗೆ ಕಾಶೀನಾಥ ನಮ್ಮ ಗಮನವನ್ನು ಸೆಳೆದನು.

ದಶಾಶ್ವಮೇಧ ಘಾಟಿನಲ್ಲಿ ಈಗ ಸಾವಿರಾರು ಮಂದಿ ಗಂಗೆಯ ಆರತಿಯನ್ನು ನೋಡಲು ಉತ್ಸುಕರಾಗಿ ಕುಳಿತಿದ್ದಾರೆ. ಗಂಗಾ ತೀರದುದ್ದಕ್ಕೂ ಅಲ್ಲಲ್ಲಿ ವಿದ್ಯುತ್ ದೀಪಗಳು ಉರಿಯುತ್ತಿದ್ದು ಕಾಶಿಗೆ ದಿವ್ಯ ಮೆರುಗನ್ನು ನೀಡಿದೆ. ಕೆಲವೆಡೆ ಎಲೆಯ ಬಟ್ಟಲುಗಳಲ್ಲಿ ದೀಪಗಳನ್ನು ಇರಿಸಿ ಗಂಗೆಗೆ ಬಿಡುತ್ತಿರುವ ದೃಶ್ಯವನ್ನು ಕಂಡಾಗ ಅಪೂರ್ವ ಅನುಭವವೇ ಆಯಿತು.

ಅಷ್ಟರಲ್ಲೆ ನನ್ನ ಆಲೋಚನಾಲಹರಿಗೆ ಕಡಿವಾಣ ಹಾಕುತ್ತ, ನಾವಿಕನು ಮುಂದಕ್ಕೆ ಹೇಳತೊಡಗಿದ, "ನಿಮ್ಮ ಸೇವಾಶ್ರಮದ ಸಾಧುಗಳೊಬ್ಬರು ನನಗೊಮ್ಮೆ ಹೀಗೆ ಹೇಳಿದ್ದುಂಟು. ಶ್ರೀರಾಮಕೃಷ್ಣರು ದೋಣಿಯಲ್ಲಿ ಇತ್ತ ಸಾಗುತ್ತಿದ್ದಂತೆ ಅವರ ಮನಸ್ಸು ಬಹಳ ಉಚ್ಚಸ್ಥಿತಿಗೇರಿದಾಗ, ಜೀವಿಗಳ ಕಿವಿಯಲ್ಲಿ ಶ್ರೀವಿಶ್ವನಾಥನೇ ಸ್ವತಃ ತಾರಕ ಮಂತ್ರವನ್ನು ನೀಡುತ್ತಿದ್ದಂತೆ, ಜಗನ್ಮಾತೆಯು ಅವರ ಭವ-ಬಂಧನವನ್ನು ಬಿಡಿಸಿ ಮೋಕ್ಷವನ್ನು ಕರುಣಿಸುತ್ತಿದ್ದಂತೆ, ಅಪೂರ್ವ ದರ್ಶನವನ್ನು ಕಂಡರಂತೆ. ಈ ವಿಷಯವನ್ನು ಇತರ ಸಾಧುಮಹಾತ್ಮರ ಬಾಯಿಂದಲೂ ನಾನು ಕೇಳಿರುವೆ. ನಿಜವಾಗಿಯೂ ನಮ್ಮ ಕಾಶಿಯಂಥ ಅದ್ಭುತ ನಗರ ಇಡೀ ಪ್ರಪಂಚದಲ್ಲಿಯೇ ಇಲ್ಲ."

ಹಿಂದಿರುಗಿ ದಶಾಶ್ವಮೇಧ ಘಾಟನ್ನು ತಲುಪಿದಾಗ ಸಂಜೆ ೭.೩೦ ಗಂಟೆ. ಗಂಗಾರತಿ ಆರಂಭವಾಯಿತು. ದೋಣಿಯಲ್ಲೆ ಕುಳಿತು ನೋಡುತ್ತಿದ್ದೆವು. ಸಾಲುಸಾಲಾಗಿ ಗಂಗಾಭಿಮುಖರಾಗಿ ನಿಂತಿದ್ದ ಒಂದೇ ರೀತಿಯ ವಸ್ತ್ರ ಧರಿಸಿದ ಏಳು ಜನ ಯುವಕ ಪೂಜಾರಿಗಳು ಕೆಲಕ್ಷಣಗಳ ಧ್ಯಾನಾನಂತರ, **'ಓಂ ಜಯ ಗಂಗೇ ಮಾತಾ। ಜೋ ನರ ತುಮಕೋ ಧ್ಯಾವತ। ಹರ ವಾಂಛಿತ ಫಲದಾತಾ।'** ಎಂಬ ಹಿನ್ನೆಲೆ ಗಾಯನದಲ್ಲಿ, ಧೂಪ, ದೀಪ, ಜಲ, ವಸ್ತ್ರ, ಪುಷ್ಪ, ಚಾಮರಗಳಿಂದ ಕೂಡಿದ ಸಂಧ್ಯಾರತಿಯನ್ನು ಮಾಡಿದರು. ನಮ್ಮ ಹಾಗೆಯೇ ಅಲ್ಲಿ ನೆರೆದಿದ್ದ ಸಾವಿರಾರು ಮಂದಿ ತನ್ಮಯರಾಗಿ ಈ ಚೇತೋಹಾರಿ ದೃಶ್ಯವನ್ನು ನೋಡುತ್ತಿದ್ದರು. ಕಡೆಯಲ್ಲಿ ಶಿವ-ಪಾರ್ವತಿ ಗಂಗಾಮಾತೆಯರನ್ನು ಸ್ತುತಿಸಿ ಎರಡೂ ಕೈಗಳನ್ನು ಮೇಲೆತ್ತಿ, 'ಹರ ಹರ ಮಹಾದೇವ' ಎನ್ನುತ್ತಾ ಭಗವಂತನಿಗೆ ಶರಣಾದೆವು. ಕಾಶಿಗೆ ಬಂದವರೆಲ್ಲ ಈ ದೃಶ್ಯವನ್ನು ನೋಡಿ ಆನಂದಿಸಲೇಬೇಕು.


ಕಾಶಿಯಲ್ಲಿ ಗಂಗಾರತಿ

ಇನ್ನುಳಿದುದೆಂದರೆ ಶ್ರೀವಿಶ್ವೇಶ್ವರನ ಅನುಚರನಾದ ಕಾಲಭೈರವನ ದರ್ಶನ. ತೀರ್ಥಯಾತ್ರಿಗಳಾರೂ 'ಭೈರೋನಾಥ' ದಲ್ಲಿರುವ ಈತನನ್ನು ದರ್ಶಿಸದೆ ಹಿಂದಿರುಗುವಂತಿಲ್ಲ. ಕೈಯಲ್ಲಿ ದಂಡವನ್ನು ಹಿಡಿದ, ಈ ಶಿವಕ್ಷೇತ್ರದ ಹಿರಿಯ ಅಧಿಕಾರಿಯ ಸ್ಥಾನವೂ ದೊಡ್ಡದೆ! ಕಾಲಭೈರವನದು ಕಪ್ಪು ಮೂರ್ತಿಯಾಗಿದ್ದು ಇತರ ದೇವದೇವಿಯರಂತೆ ಇವನಿಗೂ ಪುಷ್ಪಾಲಂಕಾರ ಮಾಡಿರುತ್ತಾರೆ. ಕಾಲರೂಪಿಯಾದ ಶಿವನೇ ಕಾಲಭೈರವನೆಂದೂ ಕೆಲವರು ಹೇಳುತ್ತಾರೆ. ಬಿಳಿ ಧೋತಿಯನ್ನುಟ್ಟ ಇವನ ದರ್ಶನವನ್ನು ದೇವಸ್ಥಾನದ ಹೆಬ್ಬಾಗಿಲಿನಿಂದಲೆ ಮಾಡಬಹುದು. ಹೊರಗಿನ ಕಿರಿದಾದ ಗಲ್ಲಿಯೂ ಚೆಂಡುಹೂವಿನ ತಳಿರು ತೋರಣಗಳಿಂದ ಶೋಭಿಸುತ್ತಿತ್ತು. ವರ್ಣರಂಜಿತ ಹಿಮಗಡ್ಡೆಗಳನ್ನು ಪರ್ವತ ವಿನ್ಯಾಸದಲ್ಲಿ ಜೋಡಿಸಿ ಸಜ್ಜುಗೊಳಿಸಿದ್ದರು. ನಮಗಂತೂ ಕೈಲಾಸಾರೂಢನಾದ ಭೈರವನ ದರ್ಶನವೇ ಆದಂತಿತ್ತು.

ಇಲ್ಲಿಂದ ಸುಮಾರು ಹದಿನಾರು ಕಿಲೋಮೀಟರುಗಳ ದೂರದಲ್ಲಿ 'ಸಾರನಾಥ' ಬೌದ್ಧ ಕ್ಷೇತ್ರವಿದೆ. ಇದು ಪ್ರಶಾಂತ ವಾತಾವರಣದ ಚಿಕ್ಕದೊಂದು ಊರು. ಜ್ಞಾನೋದಯವಾದ ಬಳಿಕ ಗೌತಮ ಬುದ್ಧನು, ಆನಂದ ಮೊದಲಾದ ಐದು ಮಂದಿ ಶಿಷ್ಯರಿಗೆ ಮೊಟ್ಟಮೊದಲು ಧರ್ಮಬೋಧನೆಯನ್ನು ಮಾಡಿದ ಸ್ಥಳ ಇದು. ಇಂದು ಸುಮಾರು ಏಳು ಸಾವಿರ ವಿದ್ಯಾರ್ಥಿಗಳು ಬೌದ್ಧ ಶಿಕ್ಷಣವನ್ನು ಪಡೆಯುವ ಈ ಕೇಂದ್ರದಲ್ಲಿ ನಾನಾ ಬೌದ್ಧದೇಶಗಳ ಜನರು ನಿರ್ಮಿಸಿದ, ಬುದ್ಧನ ಹಲವಾರು ದೇವಾಲಯಗಳಿವೆ.



ಸಾರನಾಥದ
ಬೌದ್ಧ ದೇವಾಲಯ

ಟಿಬೆಟ್ ಬೌದ್ಧ ಮಂದಿರವನ್ನು ನೋಡೋಣ ವೆಂದು ಒಳಗೆ ಹೋದಾಗ ತಥಾಗತನ ಶಾಂತಮೂರ್ತಿಯೆದುರು ಕುಳಿತು ಹಿರಿಯ ಲಾಮಾ (ಬೌದ್ಧ ಸಂನ್ಯಾಸಿಗಳು) ವಿದ್ಯಾರ್ಥಿಗಳಿಗೆ ಧ್ಯಾನದ ತರಗತಿಯನ್ನು ನಡೆಸುತ್ತಿದ್ದರು. ಎಲ್ಲೆಡೆಯೂ ಶಾಂತಿ, ನೀರವತೆ ತುಂಬಿತ್ತು. ನಮ್ಮನ್ನು ಕಂಡ ಗುರುಗಳು ಕುಳಿತುಕೊಳ್ಳುವಂತೆ ಕೈಸನ್ನೆ ಮಾಡಿದ್ದರಿಂದ ಕೊನೆಯ ಸಾಲಿನಲ್ಲಿ ಹಾಸಿದ್ದ ಆಸನದ ಮೇಲೆ ಕುಳಿತೆವು. ೧೦–೧೫ ನಿಮಿಷಗಳ ಕಾಲ ಈ ಶಾಂತ ಪರಿಸರದಲ್ಲಿ ಧ್ಯಾನಮಾಡಿ ಹೊರಬಂದಾಗ ಬೇರೊಂದು ಲೋಕದಲ್ಲಿದ್ದಂತೆ ಭಾಸವಾಯಿತು. ನಂತರ ಸಾರನಾಥದ ಮುಖ್ಯ ದೇವಾಲಯವಾದ, ೧೯೩೧ ರಲ್ಲಿ ಅಂಗಾರಿಕ ಧಮ್ಮಪಾಲರಿಂದ ಸ್ಥಾಪಿಸಲ್ಪಟ್ಟ, 'ಮೂಲಗಂಧ ಕುಟಿ ವಿಹಾರ' ಕ್ಕೆ ಬಂದೆವು. ಇಲ್ಲಿ ಸ್ವರ್ಣರಂಗಿನ ಬುದ್ಧನ ಅಮೃತಶಿಲೆಯ ಪ್ರತಿಮೆಯಿದೆ. ಆಧಾರಪೀಠದಲ್ಲಿದ್ದ ಬುದ್ಧನ ಪವಿತ್ರ ಅಸ್ಥಿಗಳನ್ನು ಪ್ರತಿವರ್ಷವೂ ಕಾರ್ತಿಕ ಪೂರ್ಣಿಮೆಯಂದು ಭಕ್ತರ ದರ್ಶನಕ್ಕಾಗಿ ಹೊರಗೆ ತೆಗೆದಿರಿಸುತ್ತಾರೆ ಎಂದು ನಮ್ಮೊಂದಿಗಿದ್ದ ಮಾರ್ಗದರ್ಶಿ ಹೇಳಿದರು. 'ಕುಟಿ ವಿಹಾರ' ದ ಗೋಡೆಗಳಲ್ಲಿ ಬುದ್ಧನ ಜನನ, ತ್ಯಾಗ–ತಪಸ್ಸು ಹಾಗೂ ಮಹಾಪರಿನಿರ್ವಾಣದ ಸುಂದರ ವರ್ಣಚಿತ್ರಗಳನ್ನು ರಚಿಸಲಾಗಿದೆ. ಪ್ರಾರ್ಥನಾಮಂದಿರದಲ್ಲಿ ನಿಶ್ಶಬ್ದತೆಯನ್ನು ಪಾಲಿಸಲಾಗುತ್ತಿತ್ತು. ನಮ್ಮ ಶ್ರೀರಾಮಕೃಷ್ಣ ಮಠಗಳಲ್ಲಿನಂತೆಯೆ, ಶುದ್ಧ ಪವಿತ್ರ ಶಾಂತ ವಾತಾವರಣವನ್ನು ಇಲ್ಲಿ ಅನುಭವಿಸಬಹುದು. ಪ್ರಾಚೀನ ವಿಹಾರವು ಈಗಿರುವ ವಿಹಾರದಿಂದ ಇನ್ನೂರು ಮೀಟರುಗಳ ದೂರದಲ್ಲಿತ್ತೆಂದು ಭಾರತ ಸರ್ಕಾರದ ಭೂಗರ್ಭ ಸಂಶೋಧನೆಗಳು ತಿಳಿಸುತ್ತವೆ. ಪಾಳುಬಿದ್ದ ಸ್ತೂಪ–ವಿಹಾರಗಳು, ಮ್ಯೂಸಿಯಮ್‌ನಲ್ಲಿನ ಪ್ರಾಚೀನ ವಿಗ್ರಹಗಳು, ಅಶೋಕಸ್ತಂಭ ಮುಂತಾದವು ನಮ್ಮ ದೇಶದ ಗತವೈಭವವನ್ನು ಸಾರುತ್ತವೆ. ಇಲ್ಲಿಂದ ಹೊರಡುವ ಮುನ್ನ ಹತ್ತಿರದ ಸಾರಂಗನಾಥ ಶಿವನ ದರ್ಶನವನ್ನೂ ಮಾಡಿದೆವು. ಅಂತೂ ಸಾರನಾಥದಲ್ಲಿ ಸುಮಾರು ಎರಡೂವರೆ ಗಂಟೆಗಳ ಕಾಲವನ್ನು ಕಳೆದದ್ದು ಸಾರ್ಥಕವೆನಿಸಿತು.

ಭಾರತಮಾತಾ ಮಂದಿರದ ಬಗ್ಗೆ ಹಿಂದೆ ಕೇಳಿದ್ದೆನಾದರೂ ಒಮ್ಮೆಯೂ ಅಲ್ಲಿಗೆ ಹೋಗಿರಲಿಲ್ಲ. ಈಗ ಬಂದೊದಗಿದ್ದ ಸುಸಂದರ್ಭವನ್ನು ಕಳೆದುಕೊಳ್ಳಬಾರದೆಂದೆನಿಸಿತು. ಈ ಮಂದಿರದಲ್ಲಿ ಯಾವ ದೇವತೆಯ ಮೂರ್ತಿಯೂ ಇಲ್ಲ. ಭವ್ಯ ಭಾರತದ ನಕ್ಷೆಯೊಂದಿದೆ. ನಮ್ಮ ಈ ಮಾತೃಭೂಮಿಯು ಎಂಥ ಪವಿತ್ರ ದೇಶ!

ಸೇವಾಶ್ರಮಕ್ಕೆ ವಾಪಸ್ಸು ಬರುವುದಕ್ಕಿಂತಲೂ ಮುಂಚೆ ಹತ್ತಿರವೇ ಇರುವ, ಶ್ರೀಮಾತೆಯವರು ೧೯೧೨, ನವೆಂಬರ್ ೫ ರಿಂದ ೧೯೧೩, ಜನವರಿ ೧೬ ರವರೆಗೆ ನೆಲೆಸಿ ಪುನೀತಗೊಳಿಸಿದ 'ಲಕ್ಷ್ಮಿ ನಿವಾಸ' ಎಂಬ ಮನೆಗೂ ಹೋಗಿಬಂದೆವು.

ನೂರು ವರ್ಷ ಮೀರಿರುವ ಈ ಸೇವಾಶ್ರಮದಲ್ಲಿ ರೋಗಿನಾರಾಯಣರ ಸೇವೆಯು ಇಂದಿಗೂ ಮುಂದುವರಿದಿದೆ. ಈ ಸೇವಾಯಜ್ಞದಲ್ಲಿ ನನ್ನ ಅಳಿಲುಸೇವೆಗೂ ಅವಕಾಶವನ್ನು ಒದಗಿಸಿಕೊಟ್ಟಿರುವ ಶ್ರೀರಾಮಕೃಷ್ಣರೂಪಿ ಶಿವಮಹಾದೇವನಿಗೆ ಕೃತಜ್ಞತಾಪೂರ್ವಕವಾಗಿ ಮತ್ತೆ ಮತ್ತೆ ತಲೆಬಾಗಿ ವಂದಿಸುತ್ತೇನೆ.